Affairs of Davangere Government Arts College

487 SRI K. RAMABHAT (Puttur).—Will the Minister for Education be pleased to state.—

(a) whether Government is aware of the fact that misfeasance and mal-feasance are going on in the administration of Government Arts Schools, Davangere :

(b) whether is it a fact that for achieving personal benefits, they have not only neglected their studies but also disregarded the valuable pieces of arts ;

(c) if so, action intended to be taken by the Government in this regard ?

SRI G. B. SHANKAR RAO (Minister for Education) —

(a) No.

(b) No. Pieces of arts are kept under safe custody.

(c) Question does not arise in view of the reply given above.

ಶ್ರೀ ಕೆ. ರಾಮಭಟ್.—ಕೆಲವು ಅಮೂಲ್ಯವಾದ ಕಲಾಕೃತಿಗಳನ್ನು ಜೋಪಾನವಾಗಿಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಆ ಕಲಾಕೃತಿಗಳನ್ನು ಕಕ್ಕಸ್ಸಿನಲ್ಲಿ ಇಟ್ಟಿದ್ದಾರೆ, ಅಲ್ಲಿ ನೀರು ತುಂಬಿದೆ ಹಾಗೂ ಅವು ತೀರಾ ಹಾಳಾಗಿವೆ ಎಂದು ತಿಳಿದು ಬಂದಿದೆ ಆದಕಾರಣ ತಾವು ಅಧಿಕಾರಿಗಳಿಂದ ಬಂದ ಉತ್ತರವನ್ನು ಕೊಟ್ಟಿದ್ದೀರೋ ಅಥವಾ ಪರಿಶೀಲನೆ ಮಾಡಿ ನೋಡಿದ್ದೀರಾ ?

ಶ್ರೀ ಜಿ. ಬಿ. ಶಂಕರ ರಾವ್.—ನಮ್ಮಲ್ಲಿರತಕ್ಕ ಮಾಹಿತಿ ಆಧಾರದ ಮೇಲೆ ಹೇಳುತ್ತೇವೆ. ಅಲ್ಲಿ ಎಲ್ಲಿಯೂ ಆ ರೀತಿ ಹಾಕಿಲ್ಲ. ಒಂದು ವೇಳೆ ಹಾಕಿದ್ದರೆ ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ರಾಮಭಟ್.—ಅಂಥ ಅನೇಕ ಆಪಾದನೆಗಳು ವಾರಪತ್ರಿಕೆಗಳಲ್ಲಿ ಬಂದಿದೆ. ಅನೇಕ ಲೈಬ್ರರಿ ಪುಸ್ತಕಗಳು ಕಾಣೆಯಾಗಿವೆ; ಆದರ ಬಗ್ಗೆ ವ್ಯವಸ್ಥೆಯಾಗಿಲ್ಲ. ಶಾಲೆಯ ಹೊರ ಭಾಗದಲ್ಲಿ ಲೈಟ್ ಹಾಕುವುದಕ್ಕೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆಂದು ಪ್ರಿನ್ಸಿಪಾಲ್ ಮೇಲೆ ಆಪಾದನೆ ಇದೆ. ವಾಣಿಜ್ಯ ಶಾಸ್ತ್ರದ ಮುಖ್ಯಸ್ಥರು ದಾವಣಗೆರೆಯ ಜಯದೇವ ಸರ್ಕಲ್ ಬಳಿ ಸ್ಟುಡಿಯೋ ಮಾಡಿಕೊಂಡಿದ್ದಾರೆ, ಅದಕ್ಕೆ ಕಾಲೇಜಿನ ಅನೇಕ ಉಪಕರಣಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಪ್ರಿನ್ಸಿಪಾಲ್ ಮತ್ತು ಅಧ್ಯಾಪಕರುಗಳು ಸೇರಿಕೊಂಡು ವಿಜಯ ಫೈನಾನ್ಸ್ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳಿಗೆ ಮತ್ತು ಇತರರಿಗೆ ಘರ್ಷಣೆ ನಡೆಯುತ್ತಿದೆ. ಆದ್ದರಿಂದ, ಇದರ ಬಗ್ಗೆ ತನಿಖೆ ನಡೆಸಬೇಕು ಮತ್ತು ಒಂದು ತಜ್ಞರ ಸಲಹಾ ಸಮಿತಿಯನ್ನು ಮಾಡಬೇಕು ಎಂದೂ ಹಾಗೂ ಆಗಾಗ ಸ್ಥಳಕ್ಕೆ ಸಂದರ್ಶನ ನೀಡಿ ಲೋಪ ದೋಷಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದೇನೆ. ಈ ಬಗ್ಗೆ ತಾವು ಏನಾದರೂ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರ ರಾವ್.—ಮಾನ್ಯ ಸದಸ್ಯರು ಆಪಾದನೆಗಳನ್ನು ಹೇಳುತ್ತಿದ್ದಾರೆ. ಅವುಗಳನ್ನು ಬರೆದು ಕೊಡಲಿ, ತನಿಖೆ ಮಾಡಿಸುತ್ತೇನೆ ; ಸಲಹಾ ಸಮಿತಿಯ ಅವಶ್ಯಕತೆ ಕಂಡರೆ ಮಾಡಿಸುತ್ತೇನೆ. ನಂತರ ತಪ್ಪಿತಸ್ಥರು ಯಾರಿರುತ್ತಾರೋ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ರಾಮಭಟ್.—ನನ್ನ ಹತ್ತಿರ ಆರೋಪದ ಪಟ್ಟಿ ಉಂಟು. ಅದನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ತಾವು ವಿಚಾರಣೆ ಮಾಡಿಸಿ ಒಂದು ಸಲಹಾ ಸಮಿತಿಯನ್ನು ಕೂಡ ನೇಮಕ ಮಾಡಿ ಎಂದು ವಿನಂತಿಸಿಕೊಳ್ಳುತ್ತೇನೆ.

MR. SPEAKER.—Please pass it on.

SRI G. B. SHANKAR RAO.—He has made certain allegations. Whatever is mentioned in the press cannot said to be true. I shall enquire into the matter. There is no substance in the allegations that have appeared in the press but the hon. member had made fresh allegations, I am prepared to take action. After enquiry, if it is necessary, I may think of constituting a committee.

Payment of mamuls by the All India Tourist Bus Permit Holders.

498. SMT S. PRAMILA (Chamarajapet).— Will inister for Transport and Minor Irrigation be pleased to state:—

whether it is not a fact that mamuls are being paid to the concerned Transport Officers, by the All India Tourist Permit Bus holders for operating Buses route-wise *viz* :

Bangalore—Cannanore
Bangalore—Mangalore
Bangalore—Hospet
Bangalore—Shimoga
Bangalore—Mysore
Bangalore—Kolar
Bangalore—Chintamani, etc.

SRI M. M. J. SADYOJATHA (Minister for Transport and Minor Irrigation).—

No.

ಶ್ರೀಮತಿ ಎಸ್. ಪ್ರಮೀಳ.—ಈ ಇಲಾಖೆ ಬಗ್ಗೆ ಪ್ರತಿ ದಿವಸ ಕೇಳುವುದೇ ಆಗಿದೆ. ಬಸ್ಸುಗಳನ್ನು ಓಡಿಸಲು ಆಲ್ ಇಂಡಿಯಾ ಪರ್ಮಿಟ್ ತೆಗೆದುಕೊಂಡಿರುವುದು ನಿಜವೆ ? ನಿಜವಾಗಿದ್ದರೆ, ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಮಾಮೂಲಿ ತೆಗೆದುಕೊಳ್ಳುತ್ತಿರುವುದು ನಿಜವೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾಮೂಲಿ ತೆಗೆದುಕೊಳ್ಳುತ್ತಿರುವುದು ನಿಜವಲ್ಲ.

ಶ್ರೀಮತಿ ಎಸ್. ಪ್ರಮೀಳ.—ನಾನು ಪ್ರಶ್ನೆಯಲ್ಲಿ ಕಾಣಿಸಿರುವ ಮಾರ್ಗಗಳಲ್ಲಿ ಪ್ರತಿ ದಿವಸ ಬಸ್ಸುಗಳು ಓಡಾತ್ತಿವೆ. ಅವುಗಳನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದಿರಿ ಎಷ್ಟು ಜನಗಳ ಮೇಲೆ ಕೇಸ್ ಹಾಕಿದ್ದೀರಿ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕೆಲವರ ಮೇಲೆ ಕೇಸ್ ಹಾಕಿದ್ದೇವೆ. ಮತ್ತು ಫೈನ್ ಕೂಡ ಹಾಕಿದ್ದೇವೆ. For violation of conditions of permits. Rs. 6000 is levied as fine. In many cases permits have been suspended for a period of one to six months. In most of the cases, they have gone on appeal to appellate authority and stay orders have been issued by the tribunal.

ಶ್ರೀಮತಿ ಎಸ್. ಪ್ರಮೀಳ.—ಎಷ್ಟು ಜನದ ಮೇಲೆ ಕೇಸ್ ಹಾಕಿದ್ದೀರಿ ಮತ್ತು ಓಡಾಡುತ್ತಿರುವ ಬಸ್ಸುಗಳನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಉತ್ತರ ಕೊಡಲಿಲ್ಲ.